## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ನಿಜಶರಣ ಅಂಬಿಗರ ಚೌಡಯ್ಯ ನಿಗಮದ ಅಧಿಕೃತ ಷೇರು ಬಂಡವಾಳವನ್ನು ರೂ.12.00 ಕೋಟಿಗಳಿಂದ ರೂ.15.00 ಕೋಟಿಗಳಿಗೆ ಹೆಚ್ಚಳ ಮಾಡುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 407 ಬಿಎಂಎಸ್ 2020 ಬೆಂಗಳೂರು, ದಿನಾಂಕ: 28.09.2021.
2. ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ ಇವರ ಪ್ರಸ್ತಾವನೆ ಸಂಖ್ಯೆ: ನಿಅಚೌಅನಿ/ಷೇ.ಬಂಡವಾಳ/ ಸಿ.ಆರ್-2/2022-23 ದಿನಾಂಕ:14.06.2022

*********

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ನಿಗಧಿತ ಷರತ್ತಿಗಳಿಗೆ ಒಳಪಟ್ಟು ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಷೇರು ಬಂಡವಾಳವನ್ನು ರೂ.8.00 ಕೋಟಿಗಳಿಂದ ರೂ.12.00 ಕೋಟಿಗಳಿಗೆ ಹೆಚ್ಚಿಸಿ ಆದೇಶಿಸಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತವು ಇದುವರೆವಿಗೂ ಗಳಿಸಿದ ಲಾಭ, ಅದಕ್ಕನುಗುಣವಾಗಿ ಪಾವತಿಸಿರುವ ಬಗ್ಗೆ ವಿವರ ಮತ್ತು ನಿಗಮದ ಅಧಿಕೃತ ಷೇರು ಬಂಡವಾಳವು ರೂ.12.00 ಕೋಟಿಗಳಾಗಿರುವುದಕ್ಕೆ MOA ಮತ್ತು AOA ನಲ್ಲಿ ತಿದ್ದುಪಡಿ ಮಾಡಿರುವ ವಿವರಗಳನ್ನು ನೀಡಿ, ಅಧಿಕೃತ ಷೇರು ಬಂಡವಾಳವನ್ನು ರೂ.12.00 ಕೋಟಿಗಳಿಂದ ರೂ.20.00 ಕೋಟಿಗಳಿಗೆ ಹೆಚ್ಚಳ ಮಾಡುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 369 ಬಿಎಂಎಸ್ 2022,**
**ಬೆಂಗಳೂರು, ದಿನಾಂಕ:08-11-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತದ ಷೇರುಬಂಡವಾಳವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ರೂ.12.00 ಕೋಟಿಗಳಿಂದ ರೂ.15.00 ಕೋಟಿಗಳಿಗೆ ಹೆಚ್ಚಿಸಿ ಆದೇಶಿಸಿದೆ.

**ಷರತ್ತುಗಳು:**

1. ನಿಗಮವು ಮುಂದಿನ ವರ್ಷಗಳಿಂದ ಗಳಿಸುವ ಲಾಭದಲ್ಲಿ ಸರ್ಕಾರದ ಷೇರು ಬಂಡವಾಳದ ಪ್ರಮಾಣಕ್ಕನುಗುಣವಾಗಿ ಡಿವಿಡೆಂಡ್ ನೀಡತಕ್ಕದ್ದು.
2. ನಿಗಮದ ಯೋಜನೆಗಳಲ್ಲಿ ಫಲಾನುಭವಿಗಳಿಗೆ ಒಸಗಿಸುವ ಸಾಲವು ಮರುಪಾವತಿಯಾಗುವಂತೆ ಕ್ರಮವಹಿಸತಕ್ಕದ್ದು.
3. ಅಧಿಕೃತ ಷೇರು ಬಂಡವಾಳವು ರೂ.15.00 ಕೋಟಿಗಳಾಗುತ್ತಿರುವುದಕ್ಕೆ MOA ಮತ್ತು AOA ನಲ್ಲಿ ಸೂಕ್ತ ಸಕಾಲಿಕ ತಿದ್ದುಪಡಿ ಮಾಡಿ ಸರ್ಕಾರಕ್ಕೆ ತಿಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 337 ವೆಚ್ಚ-3/2020 ದಿನಾಂಕ:14.09.2022 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Shaheenparveen 08/11/2022

**(ಷಾಹೀನ್ ಪರ್ವೀನ್.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು.
6. ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

********